

ಗಂಡು ಸಿಗುವುದಿಲ್ಲ, ಗಂಡಿಗೆ ಕೆಲಸ ಸಿಗುವುದಿಲ್ಲ ಅನ್ನೋ ಮಾತು ಹಳೆಯದಾಯಿತು. ಈಗ ಕಾಲ ಬದಲಾಗಿದೆ. ಗಂಡಿಗೆ ಹೆಣ್ಣು ಸಿಗುವುದಿಲ್ಲ... ಇದು ಒಂದು ಕಾಲದಲ್ಲಿ ಹೆಣ್ಣಿನ ಶೋಷಣೆ ಮಾಡಿ, ವರದಕ್ಷಿಣೆಯಂತಹ ಸಮಾಜ ಕಂಟಕ ಪಿಡುಗುಗಳಿಗೆ, ಗಂಡಿನ ದಬ್ಬಾಳಿಕೆಗೆ ಹೈರಾಣಾದ ಹೆಣ್ಣುಮಕ್ಕಳ ಶಾಪವೇ ಇರಬೇಕು. ಅಲ್ವೇನೇ ಅಕ್ಕ?' ತಾರಮ್ಮಯ್ಯ ಎನ್ನುವಂತೆ ಕೈ ತಿರುವಿದ.

'ಅದೆಲ್ಲಾ ಬಿಡು ಮಾರಾಯ, ನನ್ನ ಮಗ ಅವರೆಲ್ಲರಿಗಿಂತಲೂ ದೊಡ್ಡವನು. ಮೊದಲು ನನ್ನ ಮಗನಿಗೆ ಒಂದು ಪ್ರಪೋಸಲ್ ಹುಡುಕು' ವಸುಮತಿಯಕ್ಕನ ನೋವು ಸ್ವಾರ್ಥಕ್ಕೆ ತಿರುಗಿತು. ಅವಳು ಯಾರಿಗೆಲ್ಲಾ ಸಂಬಂಧ ಹುಡುಕಿ ಮದುವೆ ಮಾಡಿಸಿದ್ದಳೋ ಅವರೆಲ್ಲರಲ್ಲೂ ಅವಳದ್ದು ಕೋರಿಕೆ ಒಂದೆ... 'ನನ್ನ ಮಗನಿಗೊಂದು ಹೆಣ್ಣು ಹುಡುಕಿಕೊಡಿ'.

ಹೆಣ್ಣನ್ನು ದಿಢೀರನೇ ಸೃಷ್ಟಿಸಲು ಸಾಧ್ಯವೇ? ಹುಡುಕುವ ಪ್ರಯತ್ನ ಮಾಡಬೇಕಲ್ಲವೇ? ಬ್ರಹ್ಮ ಎಲ್ಲೋ ಒಂದು ಕಡೆ ಹುಡುಗಿಯನ್ನು ಸೃಷ್ಟಿಸಿರಬಹುದು. ಹಾಗಂತ ಸುಮ್ಮನೆ ಕುಳಿತರಾಗುವುದೇ? ಹುಡುಕಲೇಬೇಕು.

ವಸುಮತಿಯಕ್ಕನ ಮಗ ಆದಿತ್ಯನೇನು ಕುಂಟನೇ? ಕುರುಡನೇ? ಹೆಳವನೇ? ಮೂಗನೇ? ಕುರೂಪಿಯೇ? ಅವಿದ್ಯಾವಂತನೇ? ಬಡವನೇ? ಇಲ್ಲ, ಯಾವುದೂ ಅಲ್ಲ. ನೋಡೋದಿಕ್ಕೆ ಮನ್ಮಥನೇ. ಓದಿದ್ದು ಸಿವಿಲ್ ಎಂಜಿನಿಯರಿಂಗ್ ಡಿಪ್ಲೊಮಾ ಆದರೂ ಅಪ್ಪ ಮಾಡಿಟ್ಟ ಆಸ್ತಿ ಮೂರು ತಲೆಮಾರು ತಿಂದು ತೇಗುವಷ್ಟಿದೆ. ಆದರೂ ಒಂದೇ ಒಂದು ಸಂಬಂಧ ಕುದುರುವುದಿಲ್ಲವೆಂದರೆ? ಬೇರೆ ಏನಾದರೂ ಕಾರಣವಿದ್ದೀತು? ಹುಡುಗನ ಗುಣ ನಡತೆಯಲ್ಲೂ ದೋಷವಿಲ್ಲ. ತಾನಾಯಿತು ತನ್ನ ಕೆಲಸವಾಯಿತು ಅನ್ನುವಷ್ಟು ಸಾತ್ವಿಕ ಗುಣದವನು. ಇವಿಷ್ಟು ಅರ್ಹತೆ ಸಾಕಾಗದೆ?

ಅದೆಷ್ಟೊ ಸಂಬಂಧಗಳು ಬಂದರೂ, ಒಪ್ಪಿಕೊಂಡರೂ ಕೊನೆ ಗಳಿಗೆಯಲ್ಲಿ ತಪ್ಪಿಹೋಗುವುದೇಕೆ? ಆತನ ಜಾತಕದಲ್ಲಿಯೇ ದೋಷವಿದೆಯೇ? ವಸುಮತಿಯಕ್ಕ ಅದೆಷ್ಟು ಹೆಣ್ಣು ಹೆತ್ತವರ ಬೆನ್ನು ಬಿದ್ದು ಕೇಳಿದ್ದಿದೆ, ಕೋರಿ ಕೊಂಡದ್ದಿದೆ. ಆದರೆ ಪ್ರತಿಕ್ರಿಯೆ ಮಾತ್ರ ಶೂನ್ಯವೇ.

ಮಗನಿಗೆ ಸಂಬಂಧ ಹುಡುಕುವಲ್ಲಿ ಸೋತು ಸುಣ್ಣವಾದ ವಸುಮತಿಯಕ್ಕ ಈಗ ಸಭೆ ಸಮಾರಂಭಗಳಿಗೆ ಹೋಗುವುದನ್ನೇ ಬಿಟ್ಟಿದ್ದಾಳೆ. ಮನೆಯ ಹೊಸ್ತಿಲು ದಾಟಿ ಹೊರಗೆ ಬರುವುದನ್ನೂ ಈಗ ನಿಲ್ಲಿಸಿದ್ದಾಳೆ. ಸಾಯುವ ಮೊದಲು ಮಗನ ಮದುವೆಯನ್ನು ನೋಡಿಯೇ ಸಾಯಬೇಕೆಂದುಕೊಂಡವಳಿಗೆ ಈಗ ವೈರಾಗ್ಯ ಬಂದುಬಿಟ್ಟಿದೆ. ಕೊನೆಗೆ ಸೋತು ಹೋಗಿ ಮಗನಿಗೆ ಆ ಜವಾಬ್ದಾರಿಯನ್ನು ಬಿಟ್ಟಿದ್ದಾಳೆ.

'ನೀನು ಯಾರನ್ನಾದರೂ ಲವ್ ಮಾಡಿದ್ದಿಯನಾ? ಹೇಳು ಮಾರಾಯ, ಆ ಹುಡುಗಿಯನ್ನಾದರೂ ಮದುವೆ ಮಾಡಿಸುವ' ಎಂದು ಬೇಸರದಲ್ಲಿಯೇ ಕೇಳಿಬಿಡುತ್ತಾಳೆ. ಅಂತು ಆದಿತ್ಯನ ಅರ್ಧ ಆಯಸ್ಸು ಮುಗಿದು ಕೆಪ್ಪಾಗಿ ಕೂತಿದ್ದ ಅಮ್ಮನ ಮಾತಿಗೆ.

* * *

ಆ ದಿನಗಳು ಎಷ್ಟು ಚೆನ್ನಾಗಿದ್ದವು ಅನಿಸಿತು ಚಿರಂತನ್‌ಗೆ. ಶಿಲ್ಪಾಳ ಭೇಟಿಯಾಗಿದ್ದೇ ನಡು ರಸ್ತೆಯಲ್ಲಿ! ರಾಷ್ಟ್ರೀಯ ಹೆದ್ದಾರಿಯ ನಡುವೆ ಬಸ್ಸು ಕೆಟ್ಟು ನಿಂತಿದ್ದಾಗ ರಿಪೇರಿಗೆಂದು ಸಂಚಾರಿ ವರ್ಕ್‌ಶಾಪ್ ಟ್ರಕ್‌ನಲ್ಲಿ ಬಂದಿಳಿದವಳು. ಬಸ್ಸಿನಿಂದ ಇಳಿದ ಪ್ರಯಾಣಿಕರೆಲ್ಲಾ ಗುಂಪುಗೂಡಿ ಅವಳನ್ನು ನೋಡಿ ಹುಬ್ಬೇರಿಸಿದ್ದರು. ದಂತದ ಬೊಂಬೆಯಂತಹ ಹುಡುಗಿ. ವರ್ಕ್‌ಶಾಪ್‌ನ ಯೂನಿಫಾರಂನಲ್ಲಿದ್ದ ಅವಳು ಡ್ರೈವರ್‌ಗೆ ಏನೋ ಪಿಸುಗಿ ಎಂಜಿನ್‌ಗೆ ಚಾಲನೆ ಕೊಡಲು ಹೇಳಿದಳು. ಆ ಸದ್ದಿನಿಂದಲೇ ಏನನ್ನೋ ಗ್ರಹಿಸಿ ಯಂತ್ರವನ್ನು ನಿಲ್ಲಿಸಿ ಆ ಬಿರುಬಿಸಿಲಿನಲ್ಲಿ ಬಿಸಿಯೇರಿದ ಟಾರು ರಸ್ತೆಯಲ್ಲಿ ಬಸ್ಸಿನ ಅಡಿಗೆ ತೂರಿ ರಿಪೇರಿಗೆ ತೊಡಗಿದಾಗ ಚಿರಂತನ್‌ಗೆ ಅಚ್ಚರಿ ಜೊತೆಗೆ ಅವಳ ಬಗ್ಗೆ ಕನಿಕರವೂ ಮೂಡಿತು. ಅವಳು ಬಸ್‌ನ ಅಡಿಯಿಂದಲೇ 'ಸ್ಪಾನರ್' ಎಂದು ಕೈ ಹೊರಗೆ ಚಾಚಿದಾಗ ನಿಂತು ನೋಡುತ್ತಿದ್ದ ಜನ ಸಮೂಹದಿಂದ ಹೊರಗೆ ಬಂದು ಟೂಲ್ಸ್ ಬಾಕ್ಸ್‌ನಿಂದ ಅದನ್ನು ತೆಗೆದು ಕಂಡಕ್ಟರ್ ಬರುವ ಮೊದಲೇ ಅವಳತ್ತ ಚಾಚಿದ.

ಅರ್ಧಗಂಟೆಯ ಹೋರಾಟದಲ್ಲಿ ಬಸ್ಸಿನ ಯಂತ್ರ ಮೊರಗುಟ್ಟಿದಾಗ ಎಲ್ಲರೂ ನಿರಾಳರಾದರೆ, ಅವಳದ್ದು ನಿಟ್ಟುಸಿರು. ಬಸ್ಸು ಸಮಯ ಸರಿದೂಗಿಸಲೆಂದು ಆ ಟ್ರಾಫಿಕ್‌ನಲ್ಲಿಯೂ ಭರದಿಂದ ಮುನ್ನುಗ್ಗುತ್ತಿತ್ತು ಚಿರಂತನ್‌ನ ಅಂತರ್ಯದಲ್ಲೆದ್ದ ವಿಪ್ಲವದಂತೆ. ಅವಳ ಯೂನಿಫಾರಂಗೆ ಅಂಟಿಕೊಂಡಿದ್ದ ನೇಮ್ ಪ್ಲೇಟ್‌ನಲ್ಲಿ ಅವಳ ಹೆಸರು ಅಚ್ಚಾಗಿತ್ತು.

ಶಿಲ್ಪಾಳಿಗೆ ಇವತ್ತೇಕೋ ಎಡಗಡೆಗೆ ಎದ್ದೆನೇನೋ ಅನಿಸಿತು. ಎರಡು ತಿಂಗಳಿನಿಂದ ಊರಿಗೆ ಟ್ರಾನ್ಸ್‌ಫರ್‌ಗೆ ಪ್ರಯತ್ನಿಸುತ್ತಿದ್ದರೂ ಅವಳ ಅಧಿಕಾರಿ ಸತಾಸುಮ್ಮನೆ ಸತಾಯಿಸಿ ಅವಳನ್ನು ಡಿಪೋದಿಂದ ಹೊರಗೆ ಸಂಚಾರಿ ವಾಹನದಲ್ಲಿ ಕಳುಹಿಸಿ ಕೆಲಸ ಮಾಡಿಸುತ್ತಿದ್ದ. ಕಾರಣ ಅಧಿಕಾರಿಗೂ ಗೊತ್ತಿಲ್ಲ, ಶಿಲ್ಪಾಳಿಗೂ ತಿಳಿದಿಲ್ಲ. ಯಾವ ಜನ್ಮದ ಶತ್ರುವೋ ಅನ್ನುವ ಹಾಗಿದೆ ಅವನ ವೈಖರಿ.

ಅವಳು ಡಿಪೋಗೆ ಬರುವಾಗ ರಾತ್ರಿ ಹೊತ್ತು ಹೊರಡುವ ಒಂದಷ್ಟು ಬಸ್ಸುಗಳು ಲೈಟ್‌ನ ಸಮಸ್ಯೆಯೆಂದು ಸಾಲಾಗಿ ನಿಂತಿದ್ದವು. ಕಂಡಕ್ಟರ್‌ಗಳು ತಾ ಮುಂದು ತಾ ಮುಂದು ಎಂದು ಅವಳನ್ನು ಒತ್ತಾಯಿಸುವವರು. ಅವಳ ಸಹೋದ್ಯೋಗಿ ರಮೇಶ ಬೇರೆ ರಜೆಯಲ್ಲಿದ್ದ. ಕೆಲಸದ ಒತ್ತಡ ವಿಪರೀತವಾಗಿತ್ತು. ಆ ನಡುವೆ ಮನೆಯಿಂದ ಫೋನ್ ಕರೆ. ಹತ್ತಾರು ಬಾರಿ ಫೋನ್ ಕೂಗಿಕೊಂಡ ಮೇಲೆ ಎತ್ತಿಕೊಂಡಳು. 'ಚಿನ್ನುಗೆ ಆರಾಮ ಇಲ್ಲ. ಈ ವಾರನಾದ್ರೂ ಊರಿಗೆ ಬಾ' ಅಂತ ಅವಳ ಅಮ್ಮನ ರಾಗ. ಏನೆಂದು ಉತ್ತರಿಸಿಯಾಳು? ಕೆಲಸಕ್ಕೆ ಸೇರಿದ ಮೇಲೆ ಕೆಲವೊಂದು ವೈಯಕ್ತಿಕ ವಿಷಯಗಳನ್ನು ತ್ಯಾಗ ಮಾಡಲೇಬೇಕು. ಅಮ್ಮನಿಗೇನೋ ಸಬೂಬು ನೀಡಿ ಫೋನ್ ಕರೆಯನ್ನು ನಿಲ್ಲಿಸುವ ಹೊತ್ತಿಗೆ ಸಾಲು ನಿಂತಿದ್ದ ಕಂಡಕ್ಟರ್‌ಗಳ ಗೊಣಗಾಟದ ಮಾತಿನ ನಡುವೆ ಅಧಿಕಾರಿಯ ಖಾರವಾದ ಮಾತು. ಎಲ್ಲಾ ಗಾಡಿಗಳನ್ನು ಪರಿಶೀಲಿಸಿ ಕೆಲಸ ಮುಗಿಸುವ ಹೊತ್ತಿಗೆ ಹೊತ್ತು ಮೀರಿತ್ತು. ತಟಕ್ಕನೆ ಕೆಲಸದ ಸಮಯ ಮುಗಿದ ಕೂಡಲೇ ಎದ್ದು ಬರುವಂತೆ ಇರಲಿಲ್ಲ.

ಅವಳು ಡಿಪೋದಿಂದ ಹೊರಗೆ ಬರುವಾಗ ಹಾರ್ದಿಕ್ ಬೈಕ್‌ನಲ್ಲಿ ಕಾಯುತ್ತಿದ್ದ. 'ಹೊತ್ತು ಗೊತ್ತು ಇಲ್ಲದ ನಿನ್ನದೊಂದು ಕೆಲಸ' ಎಂದು ಗೊಣಗಿಕೊಂಡವ ಅವಳು ಬೈಕನ್ನೇರುತ್ತಲೇ ರಾಕೆಟ್‌ನಂತೆ ಫ್ಲಾಟ್‌ನತ್ತ ಹಾರಿದ. ಅವನ ಈ ಸ್ಟಂಟ್‌ಗೇನೆ ಅವಳು 'ಫಿದಾ' ಆಗಿದ್ದು. ಯಾವ ನಿರ್ಬಂಧವೂ ಇಲ್ಲದೆ, ಯಾರ ಹಂಗೂ ಇಲ್ಲದೆ ತನಗಿಂತಲೂ ವಯಸ್ಸಿನಲ್ಲಿ ಕಿರಿಯವನಾದ ಹಾರ್ದಿಕ್‌ನಂತಹ ಯುವಕನ ಜೊತೆಗೆ ಆ ಮಹಾನಗರದಲ್ಲಿ ಜೊತೆಯಾಗಿ ಬದುಕುತ್ತಿರುವುದು.